ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 8 ನವೆಂಬರ್ 2020




ಪಾತಾಳ ಲೋಕದ ಪ್ರವಾದಿ ದಸ್ತಯೇವ್‌ಸ್ಕಿ

12



ಅಪ್ರತಿಮ ಕನ್ನಡತಿ

13



ಅಂತರಿಕ್ಷದ 'ಗೃಹ ಪ್ರವೇಶ'ಕ್ಕೆ 20ರ ಸಂಭ್ರಮ



# ಪ್ರೇಮಲೋಕದ 'ಧರ್ಮ'ಸಂಕಟ

'ಮತಾಂತರಕ್ಕಾಗಿ ಮದುವೆ' ಕುರಿತ ಚರ್ಚೆಯೀಗ ಮತ್ತೆ ಸದ್ದು ಮಾಡುತ್ತಿದೆ. ಮತಾಂತರ ಉದ್ದೇಶದ ಮದುವೆಗಳನ್ನು ನಿರ್ಬಂಧಿಸಲು ಕಾನೂನು ರೂಪಿಸುವುದಾಗಿ ಕರ್ನಾಟಕ ಸೇರಿದಂತೆ ಬಿಜೆಪಿ ಆಡಳಿತದ ಕೆಲವು ರಾಜ್ಯಗಳು ಹೇಳಿಕೊಂಡಿವೆ. 'ಲವ್ ಜಿಹಾದ್' ಪದ ಉಗ್ರ ಬಹುಸಂಖ್ಯಾತವಾದದ ಸೃಷ್ಟಿಯಾಗಿದ್ದು, ಹಿಂದೂ ಧಾರ್ಮಿಕ ಅತಿರೇಕಗಳಿಂದ ಪ್ರೇರಿತವಾಗಿದೆ ಎಂಬ ವಾದ ಕೂಡ ಅಷ್ಟೇ ಬಲವಾಗಿ ಕೇಳಿಬರುತ್ತಿದೆ. ಬಿಜೆಪಿ ಆಡಳಿತದ ಸರ್ಕಾರಗಳ ನಡೆಯನ್ನು ಸ್ವಾತಂತ್ರ್ಯ, ಮುಕ್ತತೆ, ಘನತೆ, ಸ್ವಾಯತ್ತತೆ ಮೇಲಿನ 'ಕಾನೂನು ದಾಳಿ' ಎಂದೂ ಅರ್ಥೈಸಲಾಗುತ್ತಿದೆ. ನಿಜಕ್ಕೂ 'ಮತಾಂತರಕ್ಕಾಗಿ ಮದುವೆ'ಯ ಮಜಕೂರು ಏನು? ಎರಡು ಭಿನ್ನ ವ್ಯಾಖ್ಯಾನಗಳು ಇಲ್ಲಿ ಮುಖಾಮುಖಿಯಾಗಿವೆ...

## ಹಿಂಸಾತ್ಮಕ ರೂಪಕವಾಗಿ 'ಲವ್ ಜಿಹಾದ್'

**ತೀಸ್ತಾ ಸೆಟಲ್ವಾಡ್**



ಅದು 1998ರ ಅಕ್ಟೋಬರ್ 6ನೇ ತಾರೀಖು. ಅಫ್ಘಾನಿಸ್ತಾನದ ಕಾಬೂಲ್‌ನಿಂದ ಸುಮಾರು 130 ಕಿಲೊಮೀಟರ್ ದೂರದಲ್ಲಿ ಆರನೇ ಶತಮಾನಕ್ಕೆ ಸೇರಿದ ಮತ್ತು ಗಾಂಧಾರ ಕಲಾ ಸಂಸ್ಕೃತಿಯ ಪ್ರತೀಕವಾಗಿದ್ದ 'ಬಮಿಯನ್ ಬುದ್ಧ'ರನ್ನು ತಾಲಿಬಾನೀಯರು ಸ್ಫೋಟಿಸುವುದಕ್ಕಿಂತ ಕರಾರುವಾಕ್ಕಾಗಿ ಎರಡು ವರ್ಷ, ಐದು ತಿಂಗಳ ಮೊದಲು. ಆ ದಿನ, ಗುಜರಾತ್ ರಾಜ್ಯದ ಪೊಲೀಸ್ ಮಹಾನಿರ್ದೇಶಕ ಸಿ.ಪಿ. ಸಿಂಗ್ ಅವರನ್ನು ನಾನು ಸಂದರ್ಶನ ಮಾಡಿದ್ದೆ. ಅಪಹರಣ ಕೃತ್ಯ ಮತ್ತು ಬಲ ಪ್ರಯೋಗದ ಮೂಲಕ ಅಂತರಧರ್ಮೀಯ ಮದುವೆಗಳಿಗೆ ಕಾರಣರಾಗುತ್ತಿದ್ದಾರೆ ಎಂದು ಆರೋಪಿಸಿ ಕ್ರೋಧೋನ್ಮತ್ತರಾಗಿದ್ದ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ಕಾರ್ಯಕರ್ತರು ಅಲ್ಪಸಂಖ್ಯಾತರ ಮೇಲೆ ಸರಣಿ ದಾಳಿಗಳನ್ನು ನಡೆಸಿದ ದಿನಗಳು ಅವು.

'ಬಲವಂತದ ಅಂತರಧರ್ಮೀಯ ವಿವಾಹಗಳು ಮತ್ತು ಮತಾಂತರದ ಕುರಿತ ಆರೋಪಗಳು ಹೆಚ್ಚಿನ ಸಂದರ್ಭಗಳಲ್ಲಿ ಸಂಪೂರ್ಣವಾಗಿ ಆಧಾರರಹಿತ' ಎಂದು ಡಿಜಿಪಿಯವರು ನನಗೆ ನೀಡಿದ ಸಂದರ್ಶನದಲ್ಲಿ (Communalism Combat, ಅಕ್ಟೋಬರ್ 1998) ಯಾವುದೇ ಸಂಶಯಕ್ಕೆ ಎಡೆ ಇಲ್ಲದಂತೆ ತಿಳಿಸಿದ್ದರು. ಯುವತಿಯರು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಂಡು, ತಮಗೆ ಇಷ್ಟವಾದ ಸಂಗಾತಿಗಳೊಂದಿಗೆ ಸ್ವ-ಇಚ್ಛೆಯಿಂದಲೇ ಮದುವೆಯಾಗಿದ್ದಾರೆ ಎಂದೂ ಅವರು ಮಾಹಿತಿ ನೀಡಿದ್ದರು. ಡಿಜಿಪಿ ಅಷ್ಟೊಂದು ಸ್ಪಷ್ಟ ಮಾಹಿತಿಯನ್ನು ಹೊಂದಿದ್ದರೂ ಮುಂದೆ (1998–2000) ಗುಜರಾತ್ ಪೊಲೀಸ್ ಇಲಾಖೆಯ ವತಿಯಿಂದ ಅಂತರಧರ್ಮೀಯ ವಿವಾಹಗಳ 'ತನಿಖೆ'ಗಾಗಿ ವಿಶೇಷ ಘಟಕವನ್ನೇ ತೆರೆಯಲಾಯಿತು. ಸಮಾನತೆಯ ಹಕ್ಕು (ವಿಧಿ 14), ಘನತೆಯಿಂದ ಜೀವಿಸುವ ಹಕ್ಕು (ವಿಧಿ 21) ಮತ್ತು ಧಾರ್ಮಿಕ ಸ್ವಾತಂತ್ರ್ಯದ ಹಕ್ಕು (ವಿಧಿ 25) ಸೇರಿದಂತೆ ಸಂವಿಧಾನ ನೀಡಿದ ಮೂಲಭೂತ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿತ್ತು ಪೊಲೀಸ್ ಇಲಾಖೆಯ ಆ ಹೆಜ್ಜೆ.

ಮುಂದೆ, ಬರೋಬ್ಬರಿ ಎರಡು ವರ್ಷ, 124 ದಿನಗಳ ಬಳಿಕ, ಅಂದರೆ 2001ರ ಮಾರ್ಚ್ 2ರಂದು, ತಾಲಿಬಾನ್ ಸರ್ಕಾರವು ಪ್ರಾಚೀನ 'ಬಮಿಯನ್ ಬುದ್ಧ'ರನ್ನು ಕೇವಲ 'ವಿಗ್ರಹ'ಗಳು ಎಂದು ಘೋಷಿಸಿತು. ಆಗ ಮುಲ್ಲಾ ಮೊಹಮ್ಮದ್ ಒಮರ್ ಅವುಗಳ ಧ್ವಂಸಕ್ಕೆ ಹೊರಡಿಸಿದ ಆದೇಶದ ಪರಿಣಾಮ 'ಜಿಹಾದ್' ಎಂಬ ಪದವು ಜಾಗತಿಕವಾಗಿ 'ಹಿಂಸಾತ್ಮಕ ಆಯುಧ' ಎಂಬರ್ಥವನ್ನು ಪಡೆದುಕೊಂಡಿತು. ಇಸ್ಲಾಂ ಹೆಸರಿನಲ್ಲಿ ಹಿಂಸೆಯ ಪ್ರಚೋದಕರು ಹಾಗೂ ರಾಜಕೀಯ ಪಟ್ಟಭದ್ರರು ನೀಡಿದ ಈ 'ಕೊಡುಗೆ' ಹೇಗಿತ್ತೆಂದರೆ 'ಜಿಹಾದ್' ಎಂಬ ಆ ಅರೇಬಿಕ್ ಪದದ ಬಗ್ಗೆ ಎಷ್ಟು ದೀರ್ಘವಾದ ಹಾಗೂ ವಿದ್ವತ್‌ಪೂರ್ಣ ವಿವರಣೆಗಳನ್ನು ನೀಡಿದರೂ ಅದಕ್ಕೆ ಅಂಟಿದ ಹೊಸ ಅರ್ಥವನ್ನು ತೊಡೆದುಹಾಕಲು, ಹುಸಿ ನಂಬಿಕೆಯನ್ನು ಹೋಗಲಾಡಿಸಲು ಸಾಧ್ಯವಾಗಲೇ ಇಲ್ಲ.

ವಿಶೇಷ ಮದುವೆ ಕಾಯ್ದೆ–1954ರ ಅಡಿ ನೀಡಲಾದ ಅವಕಾಶವನ್ನು ಬಳಸಿಕೊಂಡು, ಜಾತಿ, ಧರ್ಮಗಳ ಎಲ್ಲೆಯನ್ನೂ ಮೀರಿ ಮದುವೆಯಾದ ಜೋಡಿಗಳ ವಿರುದ್ಧ, 'ಹಿಂದೂ ರಾಷ್ಟ್ರದ ಮಾದರಿ ರಾಜ್ಯ' ಗುಜರಾತ್‌ನಲ್ಲಿ, ಪೊಲೀಸ್ ವ್ಯವಸ್ಥೆಯನ್ನೂ ಕೋರ್ಟ್‌ಗಳನ್ನೂ ಎಗ್ಗಿಲ್ಲದೆ ಬಳಸಲಾಯಿತು. ತಿಂಗಳುಗಳು ಉರುಳಿದಂತೆ, ವರ್ಷಗಳು ಕಳೆದಂತೆ ಈ ಪ್ರವೃತ್ತಿ ಹೆಚ್ಚುತ್ತಾ ಹೋಯಿತು. 2002ರಲ್ಲಿ ನರೋಡಾ ಪಟಿಯಾದಲ್ಲಿ ನಡೆದ ಪೂರ್ವನಿಯೋಜಿತ ಹತ್ಯಾಕಾಂಡಕ್ಕೆ ಕಾರಣನಾದ ಬಾಬು ಬಜರಂಗಿ ಇದೀಗ ಶಿಕ್ಷೆ ಅನುಭವಿಸುತ್ತಿರುವ ಅಪರಾಧಿ. ಆತ 'ನವಚೇತನ ಟ್ರಸ್ಟ್' ಎಂಬ ಸಂಸ್ಥೆಯನ್ನೂ ನಡೆಸುತ್ತಿದ್ದ. ಮನೆಬಿಟ್ಟು ಓಡಿಬಂದು, ತಮ್ಮದಲ್ಲದ ಹೊರ ಸಮುದಾಯದವರ ಜತೆ ಮದುವೆಯಾದ 700 ಯುವತಿಯರನ್ನು ರಕ್ಷಿಸಿರುವುದಾಗಿ ಆತ ಹೇಳಿಕೊಂಡಿದ್ದ. ಹಾಗೆ ಆ ಸಂಸ್ಥೆ 'ರಕ್ಷಣೆ' ಮಾಡಿದವರಲ್ಲಿ ಹೆಚ್ಚಾಗಿ ಇದ್ದುದು ಪಟೇಲ್ ಸಮುದಾಯದ ಹುಡುಗಿಯರು. ಅವರು ಹಿಂದೂ ಧರ್ಮಕ್ಕೇ ಸೇರಿದ ಬೇರೆ ಸಮುದಾಯಗಳ ಹುಡುಗರೊಂದಿಗೆ ವಿವಾಹವಾಗಿದ್ದರು.

ಜಾತಿಯ ಪೂರ್ವಗ್ರಹಗಳನ್ನು ಹೋಗಲಾಡಿಸಲು, ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಲು ಮತ್ತು ಸಮಾಜದಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಮೌಲ್ಯಗಳನ್ನು ಬಿತ್ತಲು, ಆ ಮೂಲಕ ಜಾತ್ಯತೀತ ಸಮಾಜ ಕಟ್ಟಲು ಶ್ರಮಿಸಿದ ಬಾಬಾಸಾಹೇಬ್ ಅಂಬೇಡ್ಕರ್ ಅವರು ಈಗಿನ, ಇಂತಹ ಸನ್ನಿವೇಶದ ಕುರಿತು ಏನು ಹೇಳುತ್ತಿದ್ದರೋ? ಬಾಬು ಬಜರಂಗಿ ಸ್ಥಾಪಿಸಿದ ಸಂಸ್ಥೆಯು ಜಾತಿಯ ಹೊರಗಿನ ಮದುವೆಗಳನ್ನು ಮುರಿಯಲು ಹಿಂಸಾತ್ಮಕ ಕೃತ್ಯಗಳಿಗೆ ಇಳಿದು ಬಲಪ್ರಯೋಗವನ್ನೂ ಮಾಡಿದ ಕುರಿತು 'ಫ್ರಂಟ್‌ಲೈನ್' ಪತ್ರಿಕೆಯು ವಿವರವಾಗಿ ವರದಿ ಮಾಡಿತ್ತು. ಜಾತಿ ಚೌಕಟ್ಟು ಮೀರಿ ಮದುವೆ ಮಾಡಿಕೊಂಡ ಜೋಡಿಗಳನ್ನು ಅಪಹರಣ ಕೂಡ ಮಾಡಲಾಗುತ್ತಿತ್ತು. ಸಂವಿಧಾನಬದ್ಧ ಹಕ್ಕುಗಳ ರಕ್ಷಣೆಯಲ್ಲಿ ಸಂಪೂರ್ಣವಾಗಿ ಸೋತ ಪೊಲೀಸ್ ವ್ಯವಸ್ಥೆ, ಈ ರೀತಿಯ ಪ್ರಕರಣಗಳಲ್ಲಿ ನಿಷ್ಕ್ರಿಯವಾಗಿ ಉಳಿದು, ಕುಕೃತ್ಯಗಳನ್ನು ಪರೋಕ್ಷವಾಗಿ ಬೆಂಬಲಿಸಿತು.

'ಲವ್ ಜಿಹಾದ್' ಎಂಬ ಪದ ಸಾರ್ವಜನಿಕ ಭೂಮಿಕೆಗೆ ಪ್ರವೇಶ ಪಡೆದಿದ್ದು ಇದೇ ಹಂತದಲ್ಲಿ. ಅಂತರಧರ್ಮೀಯ ಮದುವೆಗಳನ್ನು ಹೈಕೋರ್ಟ್, ಸುಪ್ರೀಂ ಕೋರ್ಟ್ ನೋಡುತ್ತಿರುವ ದೃಷ್ಟಿಕೋನಗಳು ಈಗ ಹೇಗಿವೆ ಎನ್ನುವುದು ನಮ್ಮೆಲ್ಲರಿಗೆ ತಿಳಿದೇ ಇದೆ. 'ಲವ್ ಜಿಹಾದ್' ಪದ ಉಗ್ರ ಬಹುಸಂಖ್ಯಾತವಾದದ ಸೃಷ್ಟಿಯಾಗಿದ್ದು, ಸಂಪೂರ್ಣವಾಗಿ ಹಿಂದೂ ಧಾರ್ಮಿಕ ಅತಿರೇಕಗಳಿಂದ ಪ್ರೇರಿತವಾಗಿದೆ. 'ಇಸ್ಲಾಮೋಫೋಬಿಯಾ' ಹಾಗೂ ಕೋಮು ದ್ವೇಷದಿಂದ ಇಲ್ಲದ ಕಥೆಯನ್ನೂ ಹೆಣೆಯಲಾಗಿದೆ. ಅದು, ಈಗ ಭಾರತೀಯ ಕೋರ್ಟ್ ರೂಮ್‌ಗಳವರೆಗೂ ನುಸುಳಿದೆ.

ಧಾರ್ಮಿಕ ಮೂಲಭೂತವಾದಿ ಸಂಸ್ಥೆಗಳು ಪ್ರೀತಿಯ ಹೆಸರಿನಲ್ಲಿ ಹಿಂದೂ ಧರ್ಮದ ಹುಡುಗಿಯರನ್ನು ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಿಸುತ್ತಿವೆ ಎಂದು ಕೇರಳದಲ್ಲಿ ಮೊದಲು ಕೆಲವು ಪ್ರಕರಣಗಳು (ಸಹನ್ ಶಾ ಎ. ವಿರುದ್ಧ ಕೇರಳ ಸರ್ಕಾರ, 2009, ಮೊದಲನೆಯದು) ದಾಖಲಾದವು. ಅವುಗಳಲ್ಲಿ 2017ರಲ್ಲಿ ವರದಿಯಾದ ಹಾದಿಯಾ ಅಲಿಯಾಸ್ ಅಖಿಲಾ ಪ್ರಕರಣವು ತುಂಬಾ ಪ್ರಸಿದ್ಧವಾದುದು. ಕುಟುಂಬದ ಇಚ್ಛೆಗೆ ವಿರುದ್ಧವಾಗಿ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದ್ದ ಆಕೆ, ಶಫೀನ್ ಜಹಾನ್ ಎಂಬುವವರನ್ನು ವಿವಾಹವಾದರು. ಹಾದಿಯಾ ಪ್ರಕರಣ ದೇಶದಾದ್ಯಂತ ಸದ್ದು ಮಾಡಿತು. ಅಂತರಧರ್ಮೀಯ ಮದುವೆ ಪ್ರಕರಣಗಳಿಗೆ ಸಂಬಂಧಿಸಿದ ತೀರ್ಪುಗಳಲ್ಲಿ ಮಹಿಳೆಯ ಸ್ವಾತಂತ್ರ್ಯ ಮತ್ತು ಅವಳ ಆಯ್ಕೆಗಳ ಕುರಿತಂತೆ ಸಂಘರ್ಷಗಳು ಹಾಗೂ ವೈರುಧ್ಯಗಳೇ ತುಂಬಿಹೋಗಿವೆ. ಮಹಿಳೆಯನ್ನು ಸದಾ ಕುಟುಂಬದ ಸ್ವತ್ತಾಗಿ ಪರಿಗಣಿಸುತ್ತಾ ಬರಲಾಗಿದ್ದು, ಸಮುದಾಯದ ಮರ್ಯಾದೆಯ ಸಂಕೇತದಂತೆ ಬಿಂಬಿಸಲಾಗುತ್ತಿದೆ.

ಅಲಹಾಬಾದ್ ಹೈಕೋರ್ಟ್ ಇತ್ತೀಚೆಗೆ, ಅಂದರೆ 2020ರ ಅಕ್ಟೋಬರ್ 8ರಂದು, ನೀಡಿದ ಆದೇಶವು (ಪೂಜಾ ಅಲಿಯಾಸ್ ಜೋಯಾ ವಿರುದ್ಧ ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು) ಮತ್ತೆ ಕಿಡಿಯನ್ನು ಹೊತ್ತಿಸಿದೆ. ಈ ಆದೇಶವು ತುಂಬಾ ಚುಟುಕಾಗಿದ್ದು, ನೇರವಾಗಿ ವಿಷಯವನ್ನು ಕೇಂದ್ರೀಕರಿಸಿದೆ. ಗುಜರಾತ್‌ನಲ್ಲಿ ನಡೆದ ಹಲವು ಪ್ರಕರಣಗಳ ಚರ್ಚೆಗೆ ವ್ಯತಿರಿಕ್ತವಾಗಿ ಈ ಪ್ರಕರಣದಲ್ಲಿ ಕೋರ್ಟ್, ಏಳು ಪ್ರಶ್ನೆಗಳನ್ನು ದೂರುದಾರಳಾದ ಮಹಿಳೆಗೆ ಕೇಳಿತು. ಆಕೆ (ಪೂಜಾ ಅಲಿಯಾಸ್ ಜೋಯಾ, 19 ವರ್ಷ) ವಯಸ್ಕಳು ಎನ್ನುವುದು ಅದರ ಗಮನಕ್ಕೆ ಬಂದಮೇಲೆ, ಆಕೆಯ ಇಚ್ಛೆಯಂತೆ ಅವಳ ಗಂಡ ಶಾವೇಜ್ ಜತೆ ಬಾಳಲು ಅನುವು ಮಾಡಿಕೊಟ್ಟಿತು. ವಯಸ್ಕಳಾದ ಆಕೆ, ತಾನು ಬಯಸಿದ ಸ್ಥಳದಲ್ಲಿ ಉಳಿಯಲು ಮುಕ್ತಳು ಎಂದು ಆದೇಶಿಸಿದ ಕೋರ್ಟ್, ಪ್ರಕರಣವನ್ನು ಖುಲಾಸೆಗೊಳಿಸಿತು.

ಹೀಗಿದ್ದೂ ಕೋರ್ಟ್ ಇನ್ನೊಂದು ಮಾತನ್ನೂ ಹೇಳಿದೆ. 'ಸಂವಿಧಾನದ ಪ್ರಕಾರ, ಯಾವುದೇ ಪ್ರಜೆ ಅವನ/ಅವಳ ಆಯ್ಕೆಯ ಧರ್ಮದ ಪ್ರಕಾರ ನಡೆಯಲು ಅಥವಾ ಅದರ ತತ್ವಗಳನ್ನು ಪ್ರಚಾರ ಮಾಡಲು ಹಕ್ಕು ಹೊಂದಿರುವುದೇನೋ ನಿಜ. ಆದರೆ, ಕೇವಲ ಮದುವೆಯ ಕಾರಣಕ್ಕಾಗಿ ಯಾವುದೇ ಪ್ರಜೆ ಮತಾಂತರ ಹೊಂದುವುದನ್ನು ಒಪ್ಪಲಾಗದು' ಎಂದು ಅದು ಅಭಿಪ್ರಾಯಪಟ್ಟಿದೆ. ಮದುವೆ ಮತ್ತು ಧರ್ಮದ ನಡುವಿನ ವ್ಯತ್ಯಾಸವನ್ನು ಎತ್ತಿತೋರಿದ ಏಕಸದಸ್ಯ ನ್ಯಾಯಪೀಠ, 'ಮದುವೆಯೇ ಬೇರೆ, ಧರ್ಮವೇ ಬೇರೆ. ಭಿನ್ನ ಮತಗಳಿಗೆ ಸೇರಿದ ಇಬ್ಬರು ಭಾರತೀಯ ಪ್ರಜೆಗಳು ಮದುವೆ ಮಾಡಿಕೊಳ್ಳಲು ಬಯಸಿದಲ್ಲಿ ವಿಶೇಷ ಮದುವೆ ಕಾಯ್ದೆ–1954ರ ಅಡಿಯಲ್ಲಿ ಅವರು ವಿವಾಹವಾಗಲು ಮುಕ್ತರು. ಈ ಅವಕಾಶವು ಏಕರೂಪ ನಾಗರಿಕ ಸಂಹಿತೆಯತ್ತ ಸಾಗುವ ಆರಂಭಿಕ ಮೆಟ್ಟಿಲು' ಎಂದೂ ಹೇಳಿದೆ.

ಕೋರ್ಟ್‌ನ ಈ ಅಭಿಪ್ರಾಯದಿಂದ ಪ್ರೇರಿತರಾದ ಉತ್ತರ ಪ್ರದೇಶ ಮತ್ತು ಹರಿಯಾಣ ರಾಜ್ಯಗಳ ಮುಖ್ಯಮಂತ್ರಿಗಳು 'ಲವ್ ಜಿಹಾದ್' ತಡೆಗೆ ಕಾನೂನು ರೂಪಿಸುವುದಾಗಿ ಹೇಳಿದ್ದಾರೆ. ಈ ಇಬ್ಬರೂ ರಾಜಕಾರಣಿಗಳು ಅಲ್ಪಸಂಖ್ಯಾತರ ಹಕ್ಕುಗಳನ್ನೇ ಹಿಂಸಾತ್ಮಕ ಗುರಿ ಮಾಡಿಕೊಂಡ, ತಮ್ಮ ಮತಧರ್ಮವೇ ಎಲ್ಲಕ್ಕಿಂತ ಶ್ರೇಷ್ಠ ಎಂಬ ವ್ಯಾಧಿ ಅಂಟಿಸಿಕೊಂಡ ರಾಜಕೀಯ ಕೃಪಾಪೋಷಿತ ವ್ಯವಸ್ಥೆಯ ಸಂಕೇತಗಳಾಗಿ ಧ್ವನಿಸಿದ್ದಾರೆ (ಕರ್ನಾಟಕದ ಮುಖ್ಯಮಂತ್ರಿಯೂ ಇದೇ ಧಾಟಿಯಲ್ಲಿ ಮಾತನಾಡಲು ಆರಂಭಿಸಿದ್ದಾರೆ).

ನಮ್ಮ ಸಂವಿಧಾನದ ಕೊಡುಗೆಗಳಾದ ಸ್ವಾತಂತ್ರ್ಯ, ಮುಕ್ತತೆ, ಘನತೆ, ಸ್ವಾಯತ್ತತೆ ಮೊದಲಾದ ಮೌಲ್ಯಗಳ ಮೇಲೆ ಈಗ ಮತ್ತೊಂದು 'ಕಾನೂನು ದಾಳಿ' ಎದುರಾಗಿರುವುದು ಸುಸ್ಪಷ್ಟ. ಈ ದಾಳಿಯನ್ನು ಹೇಗೆ ಎದುರಿಸಬೇಕು ಎಂಬ ವಿಷಯವಾಗಿ ನಾವು, ಉಳಿದ ಭಾರತೀಯರೆಲ್ಲ, ಗಂಭೀರವಾಗಿ ಆಲೋಚಿಸಬೇಕಿದೆ.

ಟಾಟಾ–ಟೈಟನ್ ಕಾರ್ಪೊರೇಟ್‌ನ ತಾನಿಷ್ಕ್ ಜ್ಯುವೆಲ್ಲರಿ ವತಿಯಿಂದ ಇತ್ತೀಚೆಗೆ ರೂಪಿಸಿದ್ದ ಜಾಹೀರಾತಿನ ಉದಾಹರಣೆಯನ್ನೇ ತೆಗೆದುಕೊಳ್ಳಿ. ಅಂತರಧರ್ಮೀಯ ವಿವಾಹದ ಕಲಾತ್ಮಕವಾದ ಆ ಸೊಬಗನ್ನು ಆಸ್ವಾದಿಸುವುದು ದೂರದ ಮಾತಾಯಿತು. ಸಂಘ ಪರಿವಾರ ಸಮರ ಸಾರಿತು. ತಕ್ಷಣ ತನಿಷ್ಕ್ ಜ್ಯುವೆಲ್ಲರಿ ಆ ಜಾಹೀರಾತನ್ನು ಹಿಂಪಡೆಯಿತು.

ಜಾತಿಯ ಪೂರ್ವಗ್ರಹಗಳಿಂದ ಮುಕ್ತವಾದ, ಅಸ್ಪೃಶ್ಯತೆ ಆಚರಿಸದ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದಿಂದ ಕೂಡಿದ ಜಾತ್ಯತೀತ ಸಮಾಜದ ಕನಸುಕಂಡಿದ್ದ ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಭಾರತೀಯರೆಲ್ಲರೂ ಅರಿತುಕೊಳ್ಳಲು ಇದು ಸಕಾಲ. ಮಣಿರತ್ನಂ ಅವರ 'ಬಾಂಬೆ' ಸಿನಿಮಾವು ಅಂತರಧರ್ಮೀಯ ವಿವಾಹವು ಹೇಗೆ ರಕ್ತಪಾತಕ್ಕೆ ಕಾರಣವಾಗಿ ಕೊನೆಗೆ ಎರಡೂ ಮತದವರನ್ನು ಒಂದುಗೂಡಿಸಿತು ಎಂಬುದನ್ನು ತೋರಿಸುತ್ತದೆ. ಆದರೆ, ಈ ಕಲ್ಪನೆ ಕೇವಲ ಸಿನಿಮಾಗೆ ಸೀಮಿತ. ಭಾರತದ ಇಂದಿನ ಸಂದರ್ಭದಲ್ಲಿ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಕುರಿತು ಯೋಚಿಸುವಾಗ ಕೂಡ ಸಾರ್ವಜನಿಕರ ಮನಸ್ಸಿನಲ್ಲಿ ಬುರ್ಖಾ ಹಾಗೂ ಘೂಂಘಟ್‌ಗಳೇ ಸುಳಿದಾಡುತ್ತವೆ.

ಲೇಖಕಿ: ಸಾಮಾಜಿಕ ಹೋರಾಟಗಾರ್ತಿ, ಪತ್ರಕರ್ತೆ, ಕನ್ನಡಕ್ಕೆ: ಪಿನಾಕ



ಕಲೆ: ಶಿವು ಹಾದಿಮನಿ

> 'ಬಾಂಬೆ' ಸಿನಿಮಾವು ಅಂತರಧರ್ಮೀಯ ವಿವಾಹವು ಹೇಗೆ ರಕ್ತಪಾತಕ್ಕೆ ಕಾರಣವಾಗಿ ಕೊನೆಗೆ ಎರಡೂ ಮತದವರನ್ನು ಒಂದುಗೂಡಿಸಿತು ಎಂಬುದನ್ನು ತೋರಿಸುತ್ತದೆ. ಆದರೆ, ಈ ಕಲ್ಪನೆ ಸಿನಿಮಾಗೆ ಸೀಮಿತ.

## ಸಾಮಾಜಿಕ ಸೌಖ್ಯವನ್ನು ಕೆಡಿಸುವ ಪಿಡುಗು

**ತೇಜಸ್ವಿ ಸೂರ್ಯ**



**ಮುಸ್ಲಿಮೇತರ** ಹೆಣ್ಣುಮಕ್ಕಳು ಮುಸ್ಲಿಂ ಸಂಗಾತಿಯನ್ನು ಮದುವೆಯಾಗಲು ಬಲವಂತವಾಗಿ ನಡೆಯುತ್ತಿರುವ ಮತಾಂತರದ ಪ್ರಕ್ರಿಯೆಯು ಈಗ ಭಾರತೀಯ ಸಮಾಜಕ್ಕೆ ದೊಡ್ಡ ಪಿಡುಗಾಗಿ ಕಾಡುತ್ತಿದೆ. ಈ ಪಿಡುಗು ಎಂತಹದ್ದು ಎಂದರೆ ನಮ್ಮ ಸಮಾಜ ಇದುವರೆಗೆ ಕಾಪಾಡಿಕೊಂಡು ಬಂದ ಸೌಖ್ಯವನ್ನೇ ಅದು ಅಳಿಸಿ ಹಾಕುವಂಥದ್ದು. ಲಿಂಗ ಸಮಾನತೆಯ ಹಾದಿಯಲ್ಲಿ ನಾವು ಇದುವರೆಗೆ ಸಾಧಿಸಿದ ಪ್ರಗತಿಯನ್ನೂ, ಶತಮಾನಗಳಷ್ಟು ಹಳೆಯದಾದ ಭಾರತೀಯ ನಾಗರಿಕತೆಯ ಬಹುತ್ವದ ಸಮತೋಲನವನ್ನೂ ಆಪೋಶನ ತೆಗೆದುಕೊಳ್ಳುವಂಥದ್ದು. ಸಮಾಜದ ಇಂತಹ ನೇಯ್ಗೆಯನ್ನು ಮತ್ತೆ ಸರಿಪಡಿಸಲು ಆಗದಂತೆ ಹರಿದುಹಾಕುವಂಥದ್ದು ಕೂಡ.

ಮಹಿಳೆಯರ –ಬಹುತೇಕ ಪ್ರಕರಣಗಳಲ್ಲಿ ತರುಣಿಯರು ಹಾಗೂ ಒಂದಷ್ಟು ಸಲ ಬಾಲಕಿಯರು– ಧಾರ್ಮಿಕ ನಂಬಿಕೆಯನ್ನು ಬಲವಂತವಾಗಿ ಪರಿವರ್ತಿಸುವ ಈ ಪಿಡುಗು, ಮೇಲ್ನೋಟಕ್ಕೆ 'ಅಂತರಧರ್ಮೀಯ ಮದುವೆ' ಎಂಬ ವೇಷ ಧರಿಸಿದರೂ ಅದರ ಪರಿಣಾಮಗಳು ನಾವು ಅಂದುಕೊಂಡಿದ್ದಕ್ಕಿಂತಲೂ ಹೆಚ್ಚು ಆಳ.

'ಲವ್ ಜಿಹಾದ್' ಎಂದು ವ್ಯಂಗ್ಯದ ಧಾಟಿಯಲ್ಲಿ ಕರೆಯಲಾಗುವ ಈ ಮದುವೆ ಪ್ರಕ್ರಿಯೆಯನ್ನು, ಒಬ್ಬರ ಧಾರ್ಮಿಕ ನಂಬಿಕೆಯನ್ನು ಇನ್ನೊಬ್ಬರ ಮೇಲೆ ಹೇರುವ ಅಥವಾ ಒಂದು ಧಾರ್ಮಿಕ ನಂಬಿಕೆಯನ್ನು ಅನುಸರಿಸುವವರ ಸಂಖ್ಯೆಯನ್ನು ದೇಶದಾದ್ಯಂತ ವಿಸ್ತರಿಸುವ ಪಿತೂರಿ ಎಂದಷ್ಟೇ ವ್ಯಾಖ್ಯಾನಿಸಿ ಸುಮ್ಮನಾಗುವಂತಿಲ್ಲ. ಮುಸ್ಲಿಮೇತರ ಯುವತಿಯರು ಮತಾಂತರಗೊಂಡು ಮುಸ್ಲಿಂ ಕುಟುಂಬಗಳ ಜತೆ ಮದುವೆ ಸಂಬಂಧ ಹೊಂದುವ ಈ ವಿದ್ಯಮಾನ, ಸಾಮಾಜಿಕ ಸೌಖ್ಯ ಹಾಗೂ ಲಿಂಗ ಸಮಾನತೆಗೆ ಹೇಗೆ ಕಂಟಕವಾಗಿದೆ ಎಂಬುದನ್ನು ತುಂಬಾ ಗಂಭೀರವಾಗಿ ಆಲೋಚಿಸಬೇಕು.

ಮುಸ್ಲಿಮೇತರ ಯುವತಿಯರನ್ನು ಬಲವಂತವಾಗಿ ಮತಾಂತರಿಸುವ ಹಾಗೂ ಮದುವೆ ಮಾಡಿಸುವ ಪ್ರಕರಣಗಳು ಪಾಕಿಸ್ತಾನದಲ್ಲಂತೂ ದಿನನಿತ್ಯದ ಬೆಳವಣಿಗೆಗಳು. ಇತ್ತೀಚೆಗೆ ವರದಿಯಾದ ಅಲ್ಲಿನ ಘಟನೆಯನ್ನೇ ಉದಾಹರಿಸುವುದಾದರೆ, ಆರ್ಝೂ ರಾಜಾ ಎಂಬ 13 ವರ್ಷದ ಕ್ರಿಶ್ಚಿಯನ್ ಬಾಲಕಿಯನ್ನು ಅಪಹರಿಸಿ, ಬಲವಂತವಾಗಿ ಮತಾಂತರಿಸಿ 44 ವರ್ಷ ವಯಸ್ಸಿನ ಅಝ್ಹರ್ ಅಲಿಗೆ ಮದುವೆ ಮಾಡಿಕೊಡಲಾಯಿತು. ದುರದೃಷ್ಟವಶಾತ್, ಭಾರತದಲ್ಲಿ ಸಹ ಈ ತೆರನಾದ ಘಟನೆಗಳು ವರದಿಯಾಗುತ್ತಿವೆ. ಅದರಲ್ಲೂ ಕೇರಳ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಹರಿಯಾಣ ಹಾಗೂ ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಇಂಥ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿವೆ. ಈ ಸಾಮಾಜಿಕ ಪಿಡುಗು ಎಷ್ಟೊಂದು ಅತಿರೇಕಕ್ಕೆ ಹೋಗಿದೆಯೆಂದರೆ, ಕೇರಳ ಹಾಗೂ ಅಲಹಾಬಾದ್ ಹೈಕೋರ್ಟ್‌ಗಳ ಗಮನವನ್ನೂ ಅದು ಸೆಳೆದಿದೆ.

ಮದುವೆಯಾಗಿ, ಮಕ್ಕಳನ್ನೂ ಹೊಂದಿರುವ ಪುರುಷರು ಪತ್ನಿ-ಮಕ್ಕಳಿಗೆ ಜೀವನಾಂಶ ಕೊಡದೇ, ಆ ಸಂಬಂಧದ ಹೊಣೆಗಳಿಗೆ ಉತ್ತರದಾಯಿತ್ವದಿಂದಲೂ ನುಣುಚಿಕೊಂಡು ಮತ್ತೊಂದು ಮದುವೆಯಾಗುವ ಉದ್ದೇಶದಿಂದ ಇಸ್ಲಾಂಗೆ ಮತಾಂತರವಾದ ಹಲವು ಉದಾಹರಣೆಗಳಿವೆ. ಮೂಲ ಧರ್ಮದಲ್ಲೇ ಇದ್ದರೆ ಕಾನೂನುಪ್ರಕಾರ ಕುಟುಂಬದ ನಿರ್ವಹಣೆಯ ಹೊಣೆ ಹೊರಬೇಕಾಗುತ್ತದೆ. ಮತಾಂತರದ ಮೂಲಕ ಅಂತಹ ಹೊಣೆಗಳಿಂದ ತಪ್ಪಿಸಿಕೊಳ್ಳಲಾಗುತ್ತದೆ.

ಹಾಗೆಂದು, ಎಲ್ಲ ಅಂತರಧರ್ಮೀಯ ಮದುವೆಗಳನ್ನೂ ವಿರೋಧಿಸಬೇಕೆಂದೇನಲ್ಲ.

ಅಂತರ್‌ಧರ್ಮೀಯ ಮದುವೆಗಳಿಗೆ ಕಾನೂನಿನ ಮನ್ನಣೆ ಗಳಿಸಿಕೊಡುವ ಸಲುವಾಗಿಯೇ ಭಾರತೀಯ ಸಂಸತ್ತು 'ವಿಶೇಷ ವಿವಾಹ ಕಾಯ್ದೆ- 1954' ಅನ್ನು ಜಾರಿಗೆ ತಂದಿದೆ. ಭಾರತೀಯ ಕಾನೂನುಗಳು ಪ್ರತಿಪಾದಿಸುವ ಮದುವೆಯ ಹಕ್ಕಿನಲ್ಲಿ ವ್ಯಕ್ತಿಯೊಬ್ಬ ಯಾರನ್ನು ಮದುವೆಯಾಗಬೇಕು ಎಂಬುದರ ಆಯ್ಕೆಯನ್ನು ಅವನಿಗೇ/ಅವಳಿಗೇ ಬಿಡಲಾಗಿದೆ. ಅಂದರೆ ವಯಸ್ಕ ಪ್ರಜೆಗಳ ಅಂತರಧರ್ಮಿಯ ವಿವಾಹಗಳಿಗೆ ಯಾವ ವಿರೋಧವೂ ಇಲ್ಲ.

ಹಾಗಿದ್ದರೂ ದೇಶದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಬೇರೆಯೇ ಆಗಿವೆ. ಮದುವೆಯ ಆಮಿಷವೊಡ್ಡಿ ಮಹಿಳೆಯರನ್ನು ಮತಾಂತರಗೊಳ್ಳುವಂತೆ ಉದ್ದೀಪಿಸುವುದು, ಬಳಿಕ ಯಾವುದೇ (ಕಾನೂನು) ರಕ್ಷಣೆ ಇಲ್ಲದೆ ಅವರನ್ನು ಪರಿತ್ಯಜಿಸುವುದು – ದೇಶದ ಹಲವೆಡೆ ಇಂತಹ ಘಟನೆಗಳು ಹೆಚ್ಚಾಗಿ ನಡೆಯುತ್ತಿರುವುದು ವರದಿಯಾಗಿದೆ. ಇಂತಹ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿರುವ ಹರಿಯಾಣ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶ ಹಾಗೂ ಕರ್ನಾಟಕದ ಸರ್ಕಾರಗಳು, ಮುಸ್ಲಿಂ ಪುರುಷರನ್ನು ಮದುವೆಯಾಗುವ ಮುಸ್ಲಿಮೇತರ ಯುವತಿಯರ ಹಕ್ಕುಗಳನ್ನು ರಕ್ಷಿಸಲು ಕಾನೂನುಗಳನ್ನು ರೂಪಿಸಲು ಮುಂದಾಗಿವೆ. ಈ ಪ್ರಸ್ತಾಪಿತ ಕಾನೂನಿನ ಉದ್ದೇಶ ಮಹಿಳೆಯರ ಹಿತಾಸಕ್ತಿಯನ್ನು ರಕ್ಷಣೆ ಮಾಡುವುದೇ ಹೊರತು ಅಂತರಧರ್ಮೀಯ ಮದುವೆಗಳನ್ನು ವಿರೋಧಿಸುವುದಲ್ಲ.

**ಕಾನೂನು ಏನೇನು?:** ಈಗಾಗಲೇ ಹೇಳಿದಂತೆ, ಮದುವೆಯ ವಯಸ್ಸು ತಲುಪಿದ ಇಬ್ಬರು ವಯಸ್ಕ ಪ್ರಜೆಗಳು 'ವಿಶೇಷ ವಿವಾಹ ಕಾಯ್ದೆ' ಅನುಸಾರ, ಸಕಲ ಕಾನೂನು ವಿಧಿವಿಧಾನಗಳನ್ನು ಪೂರೈಸಿ ಮದುವೆಯನ್ನು ಆಗಬಹುದು. ಹಾಗೆ ಮದುವೆ ನೋಂದಣಿ ಮಾಡಿಸುವ 30 ದಿನಗಳ ಪೂರ್ವದಲ್ಲಿ ಸಾರ್ವಜನಿಕ ನೋಟಿಸ್ ಹೊರಡಿಸಬೇಕು. ಸರ್ಕಾರ ನೀಡಿರುವ ಯಾವುದೇ ಅಧಿಕೃತ ಗುರುತಿನ ಚೀಟಿ, ಫೋಟೊ ಸೇರಿದಂತೆ ಅಗತ್ಯ ದಾಖಲೆಗಳನ್ನು ಮದುವೆಯ ನೋಂದಣಿಗಾಗಿ ಒದಗಿಸಬೇಕು. ಸರ್ಕಾರ ನೇಮಕಮಾಡಿದ ಅಧಿಕಾರಿಗಳು ಮಾತ್ರ ಇಂತಹ ಮದುವೆಯನ್ನು ನೋಂದಣಿ ಮಾಡಿಕೊಳ್ಳುವರು. ಈ ವಿವರಗಳನ್ನೆಲ್ಲ ನೋಡಿದಾಗ ಮದುವೆಗೆಂದು ಒಬ್ಬರು ತಮ್ಮ ಧಾರ್ಮಿಕ ನಂಬಿಕೆಯನ್ನು ತ್ಯಜಿಸಿ ಇನ್ನೊಬ್ಬರ ಧರ್ಮವನ್ನು ಒಪ್ಪಿಕೊಳ್ಳುವ ಪ್ರಮೇಯವೇ ಬರುವುದಿಲ್ಲ ಎಂಬುದು ಮೇಲ್ನೋಟಕ್ಕೇ ಸ್ಪಷ್ಟವಾಗುತ್ತದೆ.

ಅಲಹಾಬಾದ್ ಹೈಕೋರ್ಟ್‌ನ ತೀಕ್ಷ್ಣ ಅವಲೋಕನದಲ್ಲಿ ಈ ಅಂಶ ಇನ್ನೂ ಹೆಚ್ಚು ಸ್ಪಷ್ಟವಾಗುತ್ತದೆ. ಕೇವಲ ಮದುವೆ ಮಾಡಿಕೊಳ್ಳುವ ಉದ್ದೇಶದಿಂದ ಮತಾಂತರವನ್ನು ಒಪ್ಪಲಾಗದು ಎಂದು ಅದು ಹೇಳಿದೆ. ಪ್ರಿಯಾಂಶಿ @ ಕೆ.ಎಂ. ಶಮ್ರೀನ್ ವಿರುದ್ಧ ಉತ್ತರ ಪ್ರದೇಶ ಸರ್ಕಾರ; ನೂರ್ ಜಹಾನ್ ಬೇಗಂ @ ಅಂಜಲಿ ಮಿಶ್ರಾ ವಿರುದ್ಧ ಉತ್ತರ ಪ್ರದೇಶ ಸರ್ಕಾರ ಪ್ರಕರಣಗಳಲ್ಲಿ ಕೋರ್ಟ್ ಅದನ್ನು ತುಂಬಾ ಸ್ಪಷ್ಟವಾಗಿ ಹೇಳಿದೆ.

ಮುಸ್ಲಿಂ ಸಂಗಾತಿಯನ್ನು ಮದುವೆಯಾಗಲು ಹಿಂದೂ, ಸಿಖ್ ಹಾಗೂ ಕ್ರಿಶ್ಚಿಯನ್ ಧರ್ಮದ ಯುವತಿಯರು ಬಲವಂತವಾಗಿ ಇಸ್ಲಾಂ ಧರ್ಮಕ್ಕೆ ಮತಾಂತರವಾಗುವ ಸಾಕಷ್ಟು ಪ್ರಕರಣಗಳನ್ನು ನಾವು ನೋಡಿದ್ದೇವೆ. ಇದು ಹಲವು ಮಜಲುಗಳಲ್ಲಿ ಸಂಕಷ್ಟ ತಂದೊಡ್ಡುತ್ತದೆ. ಮೊತ್ತಮೊದಲಿಗೆ, ಹಿಂದೂ ಕಾನೂನುಗಳ ಮದುವೆಯ ಪರಿಕಲ್ಪನೆಯು ಮುಸ್ಲಿಂ ವೈಯಕ್ತಿಕ ಕಾಯ್ದೆಯ ಮದುವೆಯ ಪರಿಕಲ್ಪನೆಗೆ ಸಂಪೂರ್ಣ ವಿಭಿನ್ನವಾಗಿದೆ. ಮುಸ್ಲಿಂ ವೈಯಕ್ತಿಕ ಕಾಯ್ದೆಯು 'ನಿಖಾ'ವನ್ನು ಒಪ್ಪಂದವೆಂಬಂತೆ ನೋಡಿದರೆ, ಹಿಂದೂ ಕಾಯ್ದೆಯು ಮದುವೆಯನ್ನು ಪವಿತ್ರ ಸಂಸ್ಕಾರ ಎಂದು ಪರಿಗಣಿಸುತ್ತದೆ.

ಮುಸ್ಲಿಂ ಕಾನೂನು ಇಬ್ಬರು ಮುಸ್ಲಿಮರ ಮಧ್ಯೆ ನಡೆಯುವ ಮದುವೆಯನ್ನು ಮಾತ್ರ ಅನುಮೋದಿಸುತ್ತದೆ. ಹೀಗಾಗಿ ಮುಸ್ಲಿಂ ವ್ಯಕ್ತಿಯನ್ನು ಮದುವೆಯಾಗುವ ಇನ್ನೊಬ್ಬ ವ್ಯಕ್ತಿ ಮುಸ್ಲಿಂ ಆಗಿ ಮತಾಂತರಗೊಳ್ಳುವುದು ಕಡ್ಡಾಯವಾಗಿದೆ. ಆದರೆ, ಮುಸ್ಲಿಂ ವ್ಯಕ್ತಿಯು ಹಿಂದೂ ಧರ್ಮದ ವ್ಯಕ್ತಿಯನ್ನು ಮದುವೆಯಾಗಲು ಬಯಸಿದರೆ ಈ ಕಡ್ಡಾಯ ಇಲ್ಲ.

ಕಾನೂನಿನ ವಿಶ್ಲೇಷಣೆ ಮಾಡುವುದಾದರೆ, ಮುಸ್ಲಿಂ ವೈಯಕ್ತಿಕ ಕಾನೂನು ಅಂತರಧರ್ಮೀಯ ಮದುವೆಯನ್ನು ಕ್ರಮಬದ್ಧ ಎಂದು ಪರಿಗಣಿಸುವುದಿಲ್ಲ. ಇನ್ನು ಮತಾಂತರಗೊಂಡ ವಧುವಿಗೆ ಅದುವರೆಗೆ ಹಿಂದೂ ಅಥವಾ ಕ್ರಿಶ್ಚಿಯನ್ ಧರ್ಮದ ಕಾಯ್ದೆಗಳಿಂದ ಸಿಗುತ್ತಿದ್ದ ರಕ್ಷಣೆಯೂ ಇಲ್ಲವಾಗುತ್ತದೆ. ಮುಂದೆ ಜನಿಸುವ ಮಕ್ಕಳು ಸಹ ಪಿತ್ರಾರ್ಜಿತ/ ಆನುವಂಶಿಕ ಹಕ್ಕುಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ.

ಅಂತರಧರ್ಮೀಯ ವಿವಾಹ ಕುರಿತಂತೆ ಸಂವಿಧಾನಬದ್ಧವಾಗಿ ನೀಡಲಾದ ಮೌಲ್ಯಗಳನ್ನು ಎತ್ತಿಹಿಡಿಯುವುದು ಹಾಗೂ ಲಿಂಗ ಸಮಾನತೆಯ ನ್ಯಾಯವನ್ನು ಪುರಸ್ಕರಿಸುವುದು ಈಗ ಅಗತ್ಯವಾಗಿದೆ. ಆ ಕುರಿತ ಕಾನೂನಿನಲ್ಲಿ ಏನೆಲ್ಲ ಇರಬೇಕು ಎಂಬ ಕೆಲವು ಸಲಹೆಗಳು ಇಲ್ಲಿವೆ:

1. ವ್ಯಕ್ತಿಯೊಬ್ಬನ ವಯಸ್ಸು 18 ವರ್ಷ ಆಗುವವರೆಗೂ ಮತಾಂತರಕ್ಕೆ ಸಂಪೂರ್ಣ ನಿಷೇಧ ವಿಧಿಸುವುದು
2. 'ವಿಶೇಷ ವಿವಾಹ ಕಾಯ್ದೆ'ಯ ಮಾದರಿಯಲ್ಲೇ ಮತಾಂತರವಾಗಲು ಸ್ಪಷ್ಟ ಪ್ರಕ್ರಿಯೆ ರೂಪಿಸುವುದು. ಅಂದರೆ, ಯಾವ ಉದ್ದೇಶಕ್ಕಾಗಿ ಈ ಮತಾಂತರ ಎಂಬುದನ್ನು ಪ್ರಕಟಿಸಿ 30 ದಿನಗಳ ಅವಧಿಯ ಸಾರ್ವಜನಿಕ ಕಾಲಾವಕಾಶ ಕೊಡುವುದು. ಇದಕ್ಕೆ ಮೂಲ ಮತದಲ್ಲಿರುವ, 25 ವರ್ಷ ವಯಸ್ಸಿಗೂ ಮೇಲ್ಪಟ್ಟ ಇಬ್ಬರು ಸಾಕ್ಷಿದಾರರು ಇರಬೇಕು. ಈ ಘೋಷಣೆಯನ್ನು ಆ ವ್ಯಕ್ತಿಯ ಪೂರ್ಣ ಹೆಸರು, ಸ್ವೀಕರಿಸುವ ಧರ್ಮದ ಹೊಸ ಹೆಸರು, ಪಾಲಕರ ಹೆಸರು, ಅಧಿಕೃತ ಗುರುತಿನ ಚೀಟಿ ಸಂಖ್ಯೆ ಸಮೇತ ಸ್ಥಳೀಯ ಹಾಗೂ ರಾಷ್ಟ್ರೀಯ ಮಟ್ಟದ ಪತ್ರಿಕೆಗಳಲ್ಲಿ ಜಾಹೀರಾತು ರೂಪದಲ್ಲಿ ಪ್ರಕಟಿಸಬೇಕು.
3. ವಿಶೇಷ ವಿವಾಹ ಕಾಯ್ದೆಯನ್ನು ಹೊರತುಪಡಿಸಿ ಯಾವುದೇ ವೈಯಕ್ತಿಕ ಕಾಯ್ದೆಗಳ ಅಡಿಯಲ್ಲೂ ಅಂತರಧರ್ಮೀಯ ವಿವಾಹಗಳು ನೋಂದಣಿಗೊಳ್ಳಬಾರದು.
4. ಮತಾಂತರಗೊಂಡ ಎರಡು ವರ್ಷಗಳ ಬಳಿಕವಷ್ಟೇ ವಿವಾಹಕ್ಕೆ ಅವಕಾಶ ಮಾಡಿಕೊಡಬೇಕು. ಇದರಿಂದ ಮತಾಂತರದ ಉದ್ದೇಶಗಳಿಗೆ ಮದುವೆಯಾಗಿ ವಂಚಿಸುವ ಪರಿಪಾಟ ತಪ್ಪುವುದು.
5. ಅಂತರಧರ್ಮೀಯ ಮದುವೆಯನ್ನು ಕಡ್ಡಾಯವಾಗಿ ವಿಶೇಷ ವಿವಾಹ ಕಾಯ್ದೆಯ ಅಡಿಯಲ್ಲಿ ನೋಂದಾಯಿಸಬೇಕು. ಇದು ನಡೆಯದ ಮದುವೆಯನ್ನು ಅನೂರ್ಜಿತ ಎಂದೇ ಪರಿಗಣಿಸಬೇಕು.
6. ಅಂತರಧರ್ಮೀಯ ಮದುವೆಗಳು ಮತ್ತು ಕುಟುಂಬಗಳು 'ಭಾರತೀಯ ಉತ್ತರಾಧಿಕಾರ ಕಾಯ್ದೆ' ಅನುಸಾರ ನಿಗಾವಣೆಗೆ ಒಳಪಡಬೇಕೇ ಹೊರತು ಯಾವುದೇ ಧರ್ಮದ ವೈಯಕ್ತಿಕ ಕಾಯ್ದೆಗಳ ಪ್ರಕಾರ ಅಲ್ಲ ಎಂಬ ಅಂಶವನ್ನೂ ಕಡ್ಡಾಯಗೊಳಿಸಬೇಕು.

ಈ ತೆರನಾದ ಬದಲಾವಣೆ ಮಾಡಿದರೆ, ಮತಾಂತರಗೊಂಡ ವ್ಯಕ್ತಿಯು ವಿಶೇಷ ವಿವಾಹ ಕಾಯ್ದೆ ಅನುಸಾರ ಪ್ರಯೋಜನಗಳನ್ನು ಪಡೆಯಲು ಸಾಧ್ಯವಿದೆ.

ಏಕರೂಪ ನಾಗರಿಕ ಸಂಹಿತೆ ಜಾರಿಗಾಗಿ ನಾವಿನ್ನೂ ಕಾಯುತ್ತಿದ್ದು, ವಿವಾಹಕ್ಕಾಗಿಯೇ ಇಸ್ಲಾಮಿಗೆ ಮತಾಂತರಗೊಂಡು ಅದರ ಪರಿಣಾಮ ಎದುರಿಸುತ್ತಿರುವ ಯುವತಿಯರ ಹಿತಾಸಕ್ತಿಯನ್ನು ಜವಾಬ್ದಾರಿಯುತ ಸರ್ಕಾರಗಳು ಈ ಮಾರ್ಗದಿಂದಲಾದರೂ ರಕ್ಷಿಸಬೇಕಿದೆ. ಈ ಸುಧಾರಣೆಗಳನ್ನು ಯಾರಾದರೂ ವಿರೋಧಿಸುತ್ತಿದ್ದಾರೆ ಎಂದರೆ, ಅವರಿಗೆ ನಮ್ಮ ಯುವತಿಯರ ಹಿತಾಸಕ್ತಿ ರಕ್ಷಿಸುವ ಉದ್ದೇಶ ಇಲ್ಲವೆಂದೇ ಅರ್ಥ.

ಲೇಖಕ: ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ, ಬಿಜೆಪಿ ಯುವಮೋರ್ಚಾ ರಾಷ್ಟ್ರೀಯ ಘಟಕದ ಅಧ್ಯಕ್ಷ